**ದಿನಾಂಕ 15.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ: ಶ್ರೀ.ಯು.ಎಸ್. ವಕೀಲರಿಂದಃ–**

ನಿಪಿ.10 ರ ನಕಾಶೆಯಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ನಾರಾಯಣಪ್ಪನವರ ಮಗ ಶಣ್ಮುಕಪ್ಪ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ತಿಮ್ಮಯ್ಯನವರ ಖಾಲಿ ಜಾಗ ಎಂದು ನಮೂದಾಗಿರುತ್ತಾದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೆಳ್ಳುಳ್ಳಿ ತಿಮ್ಮಯ್ಯನವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಬೆಳ್ಳುಳ್ಳಿ ತಿಮ್ಮಯ್ಯನವರು ಈಗ ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಬೆಳ್ಳುಳ್ಳಿ ತಿಮ್ಮಯ್ಯನವರ ಮನೆ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ನಿಪಿ.10 ರ ನಕಾಶೆಯ ದಾವಾ ಸ್ವತ್ತಿನ ಉತ್ತರಕ್ಕೆ ಮರುಡಪ್ಪನವರ ಸ್ವತ್ತು ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನಾವು ವಾಸವಿರುವ ವಾಸವಿರುವ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಖರೀದಿಸಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆ ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ, 2000 ಸಾಲಿನಲ್ಲಿ ಖರೀದಿಸಿರಬಹುದು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಯಾರಿಂದ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ 2006 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದುವ ಸಮಯದಲ್ಲಿ ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ಮನೆಯಲ್ಲಿ ನಾವೇ ವಾಸವಿದ್ದೆವು. ನನ್ನ ತಂದೆ ಸದರಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಯಾರು ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. 2000 ಸಾಲಿನ ನಂತರ ನಾವೇ ದಾವಾ ಸ್ವತ್ತಿನ ಉತ್ತರಕ್ಕೆ ದಿಕ್ಕಿನ ಮನೆಯಲ್ಲಿ ವಾಸವಿದ್ದೆವು, ಬೇರೆ ಯಾರು ವಾಸ ಇರಲಿಲ್ಲ. ನಿಪಿ.10 ರ ನಕಾಶೆಯನ್ನು ತಯಾರಿಸಿದ ನಂತರ ಸಂಬಂಧಪಟ್ಟ ಮುನಿಸಿಪಾಲಿಟಿಯವರ ವಿರುದ್ಧ ಅದರ ಮೇಲಾಧಿಕಾರಿಯವರಿಗೆ ನಾನು ದೂರು ಸಲ್ಲಿಸಿರುವುದಿಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ತೋರಿಸಿರುವ ಅಸೆಸ್ಮೆಂಟ್ ನಂ.2211 ರ ಬಗ್ಗೆ ಖರೀದಿ ಮಾಡುವ ಪೂರ್ವದಲ್ಲಿ ಅದರ ದಾಖಲಾತಿಗಳನ್ನು ವಕೀಲರಿಗೆ ತೋರಿಸಿರುತ್ತೇವೆ. ಯಾವ

ವರ್ಷದಲ್ಲಿ ಸದರಿ ಸ್ವತ್ತನ್ನು ಖರೀದಿಸಲಾಗಿರುತ್ತದೆ ಎಂದು ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ಅಸೆಸ್ಮೆಂಟ್ ಸಂ.2211ರ ನಿವೇಶನಕ್ಕೆ ಸಂಬಂಧಿಸಿದಂತೆ ನಾವು ದಾಖಲಾತಿಗಳನ್ನು ವಕೀಲರ ಮೂಲಕ ಪರಿಶೀಲಿಸಿರುತ್ತೀರಾ ಎಂಬ ಪ್ರಶ್ನೆಗೆ ನನ್ನ ತಂದೆಯವರು ಪರಿಶೀಲಿಸಿರುತ್ತಾರೆ, ಆದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅಸೆಸ್ಮೆಂಟ್ ನಂ.2211 ಮತ್ತು 5211 ಎರಡು ಬೇರೆ–ಬೇರೆ ನಿವೇಶನಗಳು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಎರಡು ನಿವೇಶನಗಳಿಗೂ ಬೇರೆ–ಬೇರೆ ಚಕ್ಕುಬಂದಿ ಎಂದರೆ ಸರಿ. ಅಸೆಸ್ಮೆಂಟ್ ನಂ.2211ರ ನಿವೇಶನದ ಮೂಲ ಮಾಲೀಕರು ಮರುಡಪ್ಪನವರು ಆಗಿರುತ್ತಾರೆ. ಮರುಡಪ್ಪನವರಿಗೆ ಸದರಿ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನಾನು ನೋಡಿರುತ್ತೇನೆ.

1990ರ ಹಿಂದೆ ಅಸೆಸ್ಮೆಂಟ್ ನಂ.2211ರ ನಿವೇಶನವು ಯಾರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. 1990ರ ಹಿಂದಿನ ಅಸೆಸ್ಮೆಂಟ್ ನಂ.2211ರ ನಿವೇಶನದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಈ ಹಿಂದೆ ನಾನು ದಾಖಲಿಸಿದ್ದ ಅಸಲು ದಾವಾ ಸಂ.374/2013ರ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಹಾಗೂ ಈ ದಾವೆಯಲ್ಲಿಯೂ ಸದರಿ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ನಿಪಿ.10ರ ನಕಾಶೆಯಲ್ಲಿ ದಾವಾ ಸ್ವತ್ತಿನ ಅಳತೆ ಪೂರ್ವ–ಪಶ್ಚಿಮ 14 ಅಡಿ, ಉತ್ತರ–ದಕ್ಷಿಣ 21 ಅಡಿ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಬೀರೂರಿನ ಪುರಸಭೆಯವರು ದಿನಾಂಕ 10.01.2013ರಲ್ಲಿ ಒಂದು ನಿರ್ಣಯ ಕೈಗೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನಿರ್ಣಯವನ್ನು ನಾನು ಅಸಲು ದಾವಾ ಸಂ.374/2013ರ ದಾವೆಯನ್ನು ಸಲ್ಲಿಸಿದ ನಂತರವೂ ಪರಿಶೀಲಿಸಿರುವುದಿಲ್ಲ ಹಾಗೂ ಈ ದಾವೆಯು ದಾಖಲಾದ ನಂತರವೂ ಪರಿಶೀಲಿಸಿರುವುದಿಲ್ಲ. ಈ ದಾವೆಯಲ್ಲಿ ವಾದಿ ಪರ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನ್ನ ವಕೀಲರ ಮೂಲಕ ತೆಗೆಸಿಕೊಂಡು ನಾನು ನೋಡಿರುವುದಿಲ್ಲ.

ನಿಪಿ.4ರ ಪ್ರಕಾರ ದಿನಾಂಕ 10.01.2013ರಲ್ಲಿ ಬೀರೂರಿನ ಪುರಸಭೆಯವರು

ನಿರ್ಣಯ ಕೈಗೊಂಡಿದ್ದು ಆ ಪ್ರಕಾರವಾಗಿ ದಿನಾಂಕ 16.02.2013 ರಂದು ಹಾಗೂ 19.04.2013 ರಂದು ಸದರಿ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.10 ರಂತೆ ನಕಾಶೆಯನ್ನು ತಯಾರಿಸುವ ಪೂರ್ವದಲ್ಲಿ ಪುರಸಭೆಯವರು ನನ್ನ ತಾಯಿಯವರಿಗೆ ದಿನಾಂಕ 09.07.2013 ರಲ್ಲಿ ನೋಟೀಸನ್ನು ಜಾರಿ ಮಾಡಿದ್ದು, ದಿನಾಂಕ 11.07.2013 ರಂದು ಸ್ಥಳ ಪರೀಶಿಲನೆಗಾಗಿ ಬರುವುದಾಗಿ ತಿಳಿಸಿದ್ದರು ಎಂದರೆ ಸರಿ. ನಿಪಿ.4 ರ ನಿರ್ಣಯದಂತೆ ಮುನಿಸಿಪಾಲಿಟಿಯವರು ವಾದಿಯ ಹೆಸರಿಗೆ ದಿನಾಂಕ 12.12.2024 ರಂದು ದಾವಾ ಸ್ವತ್ತಿನ ಖಾತೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 20.06.2025 ರಲ್ಲಿ ಇ–ಸ್ವತ್ತನ್ನು ಸಹ ವಾದಿಯ ಪರ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಣಬಲದಿಂದ ಸದರಿ ದಾಖಲೆಯನ್ನು ಸೃಷ್ಠಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ.9 ರ ಅಧಿಕೃತ ಜ್ಞಾಪನ ಪತ್ರದಲ್ಲಿ ನನ್ನ ಪ್ರತಿವಾದ ಪತ್ರದಲ್ಲಿ ತೋರಿಸಿರುವ ಸ್ವತ್ತು ಮಂಗಳೂರು ಹೆಂಚಿನ ಮನೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಾನು ಪ್ರತಿವಾದ ಪತ್ರದಲ್ಲಿ ತೋರಿಸಿರುವ ಸ್ವತ್ತಿನ ಅಳತೆ 35 x 47 ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಡಿ.10 ರಿಂದ 12 ರ ಸ್ವಯಂ ನಿರ್ಧರಣಾ ದಾಖಲಾತಿಗಳಲ್ಲಿ ಅಸ್ಸೆಸ್ಮೆಂಟ್ ಸಂ 5129/5070 ಎಂದು ನಮೂದು ಇರುತ್ತದೆ ಎಂದರೆ ಸರಿ. ಅಸ್ಸೆಸ್ಮೆಂಟ್ ನಂ.5129/5070 ಹಾಗೂ ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಅಸ್ಸೆಸ್ಮೆಂಟ್ ನಂ.2211 ರ ನಿವೇಶನವೇ ಬೇರೆ ಎಂದರೆ, ನಾನು ದಾಖಲಾತಿಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

ಮರುಡಪ್ಪನವರು 2018 ರಲ್ಲಿ ರೈಲಿಗೆ ಸಿಕ್ಕಿ ಮರಣ ಹೊಂದಿರುತ್ತಾರೆ ಎಂದರೆ ಇರಬಹುದು. ನಾನು ಸದರಿಯವರ ಆರಾಧನೆ ಕಾರ್ಯಕ್ರಮಕ್ಕೆ ಹೋಗಿರುವುದಿಲ್ಲ. ಮರುಡಪ್ಪನವರ ಹೆಸರಿನಲ್ಲಿ ಎಷ್ಟು ಅಸ್ಸೆಸ್ಮೆಂಟ್ ಸಂಖ್ಯೆ ಆಸ್ತಿಗಳು ಇದ್ದವು ಎಂದು ನಾನು ನೋಡಿರುವುದಿಲ್ಲ. ಆದರೆ ನಾವು ಖರೀದಿಸಿದ ಆಸ್ತಿಯ ಅಸ್ಸೆಸ್ಮೆಂಟ್ ಸಂಖ್ಯೆಯನ್ನು ನೋಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಹಿಂದಿನ ಮೂಲ ಅಸ್ಸೆಸ್ಮೆಂಟ್ ಸಂಖ್ಯೆ

–1047/2150 ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ಅಸೆಸ್ಮೆಂಟ್ ಸಂಖ್ಯೆ –1047/2150ರ ನಿವೇಶನವು 1948ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ನೋಡಿ ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತು ಮೂಲತಃ ಕುಲುಮೆ ರಂಗಯ್ಯನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಅಂದರೆ ದಾವಾ ಸ್ವತ್ತು ವಾದಿಯ ಅಜ್ಜನಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ.

1970ರ ನಂತರ ವಾದಿಯ ಅಜ್ಜನ ಹೆಸರಿನಲ್ಲಿರುವ ದಾವಾ ಸ್ವತ್ತಿನ ಖಾತೆಯು ಕೈಬಿಟ್ಟು ಹೋದ ಕಾರಣ ದಿನಾಂಕ 11.10.2012ರಲ್ಲಿ ದಾವಾ ಸ್ವತ್ತಿನ ಖಾತೆ ಮಾಡಿಕೊಡುವಂತೆ ವಾದಿಯವರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಬೀರೂರಿನ ಪುರಸಭೆಯವರು ಸ್ಥಳ ಪರಿಶೀಲನೆ ಮಾಡಿ ನಿಪಿ.4ರಂತೆ ನಿರ್ಣಯ ಕೈಗೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ.41ರ ಛಾಯಾಚಿತ್ರದಲ್ಲಿ ಕಾಣುವ ಮನೆಯು ನಾವು ಖರೀದಿಸುವ ಪೂರ್ವದಲ್ಲಿ 05ವರ್ಷದ ಹಳೆಯ ಮನೆಯಾಗಿದ್ದು, ಅದನ್ನು ನಾವು ಪುನಃ ಕಟ್ಟಿಸಿಕೊಂಡಿರುತ್ತೇವೆ. ಸದರಿ ಮನೆಯನ್ನು 2005ರ ನಂತರ ನಾವು ನಿರ್ಮಿಸಿರುತ್ತೇವೆ. ನಾವು ಮನೆಯನ್ನು ನಿರ್ಮಿಸುವ ಪೂರ್ವದಲ್ಲಿ ಮುನಿಸಿಪಾಲಿಟಿಯಲ್ಲಿ ಪರವಾನಿಗೆಯನ್ನು ಪಡೆದಿರುವುದಿಲ್ಲ. ನಾನು ನನ್ನ ತಕರಾರಿನಲ್ಲಿ ತೋರಿಸಿರುವ ನಿವೇಶನವನ್ನು ಖರೀದಿಸುವ ಸಮಯದಲ್ಲಿ ಸದರಿ ನಿವೇಶನದ ಉತ್ತರಕ್ಕೆ ನನದೇ ಖಾಲಿ ನಿವೇಶನ ಇರುತ್ತದೆ ಎಂದು ಚಕ್ಕುಬಂದಿಯಲ್ಲಿ ನಮೂದಿಸಲಾಗಿರುತ್ತದೆ. ನಾನು ನನ್ನ ಕ್ರಯ ಪತ್ರದಲ್ಲಿ ಸುಳ್ಳು ಚಕ್ಕುಬಂದಿಯನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಚಕ್ಕುಬಂದಿಯನ್ನು ನೀಡಿದ ಕ್ರಯ ಪತ್ರವನ್ನು ಮಾಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಕರಾರಿನಲ್ಲಿ ತೋರಿಸಿದ ಷೆಡ್ಯೂಲ್ ನಲ್ಲಿ ನಮೂದಿಸಿದ ಅಸೆಸ್ಮೆಂಟ್ ಸಂ.2211ರ ಅಸೆಸ್ಮೆಂಟ್ ನಕಲನ್ನು ನಾನು ತೆಗೆದುಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು, ಆದರೆ ನನಗೆ

ನೆನಪಿಲ್ಲ. ನನ್ನ ತಕರಾರನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ, ಅಸ್ಸೆಸ್ಮೆಂಟ್ ಸಂ.5211 ನನ್ನ ನಿವೇಶನಕ್ಕೆ ಸಂಬಂಧಿಸಿದ ಅಸ್ಸೆಸ್ಮೆಂಟ್ ಸಂಖ್ಯೆ ಆಗಿರುವುದಿಲ್ಲ. ಅಸ್ಸೆಸ್ಮೆಂಟ್ ಸಂ.5211ರ ನಿವೇಶನಕ್ಕೆ ಸಂಬಂಧಿಸಿದಂತೆ ನನ್ನ ಪರ ಯಾವುದೇ ತಕರಾರು ಇರುವುದಿಲ್ಲ. ಅಸ್ಸೆಸ್ಮೆಂಟ್ ನಂ.5211ರ ನಿವೇಶನದ ಚಕ್ಕುಬಂದಿಯನ್ನು ಅಸ್ಸೆಸ್ಮೆಂಟ್ ಸಂ.2211ರ ನಿವೇಶನದ ಚಕ್ಕುಬಂದಿಯನ್ನು ಕ್ರಯ ಪತ್ರದಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರವನ್ನು ತಿದ್ದುಪಡಿಗೆ ಹಾಕಿರುವುದಿಲ್ಲ.

ನಿಪಿ.14ರ ಅಸ್ಸೆಸ್ಮೆಂಟ್ ನಕಲಿನಲ್ಲಿ 1942–43ರಲ್ಲಿ ಅಸ್ಸೆಸ್ಮೆಂಟ್ ಸಂ.244/190 ಹಾಗೂ ಕುಲುಮೆ ರಂಗಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.14ರಲ್ಲಿ ಕುಲುಮೆ ರಂಗಯ್ಯನ ಬೀದಿ ಎಂದು ನಮೂದಾಗಿರುತ್ತದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ಆ ರೀತಿ ಯಾವುದೇ ಬೀದಿ ಇರುವುದಿಲ್ಲ, ಅದನ್ನು ಅವರು ಹಾಗೆ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.15ರಲ್ಲಿ ಕುಲುಮೆ ರಂಗಯ್ಯನವರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿಸಲು ಮುನಿಸಿಪಾಲಿಟಿಯಿಂದ ನೋಟೀಸನ್ನು ನೀಡಿದ್ದರು ಎಂದರೆ, ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ನಿಪಿ.16ರಲ್ಲಿ ನಮೂದಿಸಿರುವಂತೆ ಕುಲುಮೆ ರಂಗಯ್ಯನವರು ದಾವಾ ಆಸ್ತಿಯಲ್ಲಿ ಬಾವಿ ತೋಡಿಸಲು ಪುರಸಭೆಯವರಿಗೆ ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ.

ನಾನು ಪ್ರತಿವಾದ ಪತ್ರದಲ್ಲಿ ತೋರಿಸಿರುವ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ನಾವು ಖರೀದಿಸಿದಾಗಿನಿಂದಲೂ ಸದರಿ ಆಸ್ತಿಗೆ ಇಲ್ಲಿಯವರೆಗು ಕಂದಾಯವನ್ನು ಪಾವತಿಸಿಕೊಂಡು ಬಂದಿರುತ್ತೇವೆ. ನಿಪಿ.41ರಲ್ಲಿ ಕಾಣುವ ಮನೆಯನ್ನು ಹೊರತುಪಡಿಸಿ ಬೀರೂರಿನಲ್ಲಿ ನನಗೆ ಬೇರೆ ಮನೆಗಳು ಇರುತ್ತವೆ. ಅವುಗಳ ಅಸ್ಸೆಸ್ಮೆಂಟ್ ಸಂಖ್ಯೆಗಳನ್ನು ಈಗ ಹೇಳಲು ಆಗುವುದಿಲ್ಲ. ತರೀಕೆರೆ ಮತ್ತು ಹೊಸದುರ್ಗಗಳಲ್ಲಿಯೂ ನನಗೆ ಸೇರಿದ ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಸ್ವತ್ತುಗಳು ನನ್ನ ಸ್ವಂತ ಸ್ವತ್ತುಗಳಾಗಿರುತ್ತವೆ. ಸದರಿ ಆಸ್ತಿಗಳನ್ನು ನಾನು ಸದರಿ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಅವುಗಳಿಗೆ ಸಂಬಂಧಿಸಿದ ಆಸ್ತಿಗಳನ್ನು ನಾನು ವಕೀಲರಿಗೆ

ತೋರಿಸಿರುವುದಿಲ್ಲ. ನಿಪಿ.32 ರಲ್ಲಿ ಅಸ್ಸೆಸ್ಮೆಂಟ್ ಸಂ.2211 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಅಸ್ಸೆಸ್ಮೆಂಟ್ ನಂ.2211 ರ ಮಾಲೀಕರು ಉಳ್ಳಿ ರಾಮಣ್ಣ ಬಿನ್ ಬೀರಣ್ಣ ಎಂದು 1993–94 ರ ಅಸ್ಸೆಸ್ಮೆಂಟ್ ನಲ್ಲಿ ನಮೂದಾಗಿರುತ್ತದೆ ಎಂದರೆ ಇರಬಹುದು ಅಥವಾ ತಪ್ಪಾಗಿ ನಮೂದಾಗಿರಬರಹುದು ಎಂದು ನುಡಿಯುತ್ತಾರೆ. ಸದರಿ ಅಸ್ಸೆಸ್ಮೆಂಟ್ ತಪ್ಪಾಗಿ ನಮೂದಾಗಿದ್ದ ಬಗ್ಗೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

ಅಸಲು ದಾವಾ ಸಂ.374/2013 ರ ದಾವೆಯಲ್ಲಿ ಸಾಕ್ಷಿ ನುಡಿದಿರುತ್ತೇನೆ. ಸಾಕ್ಷಿಯು ಸದರಿ ದಾವೆಯಲ್ಲಿ ನುಡಿದಿರುವ ಸಾಕ್ಷಿಯು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. (ಸಾಕ್ಷಿಗೆ ತಾನು ನುಡಿದಿರುವ ಸಾಕ್ಷಿಯ ವಿಚಾರಣೆಯ ದೃಢೀಕೃತ ನಕಲನ್ನು ತೋರಿಸಿ ಸಾಕ್ಷಿ ನೋಡಿ ಒಪ್ಪಿದ್ದು,ಪ್ರತಿವಾದಿ 1 ಮತ್ತು 2 ರ ವಕೀಲರ ತಕರಾರಿಗೆ ಒಳಪಟ್ಟು ನಿಪಿ.42 ಎಂದು ಗುರುತಿಸಲಾಯಿತು) ಅದೇ ರೀತಿ ಸದರಿ ಅಸಲು ದಾವಾ ಸಂ.374/2013 ರಲ್ಲಿ ನನ್ನ ಮಾವನವರಾದ ತಿಮ್ಮಪ್ಪ ಬಿನ್ ರಂಗಪ್ಪನವರು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನನ್ನ ತಕರಾರಿನಲ್ಲಿ ಎಲ್ಲಿಯೂ ಸಹ ಅಸ್ಸೆಸ್ಮೆಂಟ್ ಸಂ.5129/5079 ರ ನಿವೇಶನದ ಬಗ್ಗೆ ಎಲ್ಲಿಯೂ ತನ್ನದು ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಕರಾರಿನಲ್ಲಿ ದಿನಾಂಕ 11.07.2013 ರಲ್ಲಿ ಮುನಿಸಿಪಾಲಿಟಿಯವರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ವಾದಿಗೆ ಸಂಬಂಧಿಸಿದ ಯಾವುದೇ ವಸ್ತು ಇರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಈ ಬಗ್ಗೆ ನಾನು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ವಾದಿಗಳಿಗೆ ಸೇರಿದ ಸ್ವತ್ತನ್ನು ಲಪಟಾಯಿತಲು ಸುಳ್ಳು ಚಕ್ಕುಬಂದಿಯನ್ನು ನೀಡಿ, ಸುಳ್ಳು ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಸ್ಸೆಸ್ಮೆಂಟ್ ಸಂ.2211 ರಲ್ಲಾಗಲಿ, ನಮ್ಮ ಕ್ರಯ ಪತ್ರದಲ್ಲಿ ತೋರಿಸಿದ ಅಸ್ಸೆಸ್ಮೆಂಟ್ ನಂ.5079 ರಲ್ಲಾಗಲಿ ನಾವು ಖರೀದಿಸಿರುವ ಮರುಡಪ್ಪನವರಿಗೆ ಹಕ್ಕು, ಅಧಿಕಾರ,ಸ್ವಾಧೀನ ಇತರೆ ವಗೈರೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಅಸ್ಸೆಸ್ಮೆಂಟ್ ಸಂ.5079/2211 ಮರುಡಪ್ಪನವರಿಗೆ ಮತ್ತು ಮರುಡಪ್ಪನವರ ಕುಟುಂಬಕ್ಕೆ ಸ್ವತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.41 ರ

ಛಾಯಾಚಿತ್ರದಲ್ಲಿ ಕಾಣುವ ಮನೆಗೆ ಯಾವುದೇ ದಾಖಲಾತಿ ಇಲ್ಲದೇ ಇದ್ದುದ್ದರಿಂದ ಈ ರೀತಿ ಸುಳ್ಳು ಕ್ರಯ ಪತ್ರವಾದ ನಿಡಿ.3 ನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸ್ಸೆಸ್ಮೆಂಟ್ ಸಂ.5211ರಲ್ಲಿ ಪೂರ್ವ–ಪಶ್ಚಿಮ 14 ಅಡಿ , ಉತ್ತರ–ದಕ್ಷಿಣ 21 ಅಡಿ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.